ಮೊದಲ ಜೀವ. ಹಾಗೆ ಹೇಳುವರು. ಕಡಲಿಗೂ ಚಂದ್ರನಿಗೂ ವಿಶೇಷವಾದ ಸಂಬಂಧ. ಸೂರ್ಯನ ಬಿಸಿಲಿಗೆ ಕಡಲ ನೀರು ಆವಿಯಾಗುವುದಾದರೆ ಕಡಲು ಹುಚ್ಚೆದ್ದು ಉಕ್ಕೇರುವುದು ಚಂದ್ರನಿಂದ. ಹುಣ್ಣಿಮೆಯಂದು ಚಂದ್ರಬಿಂಬ ಇಡಿಯಾಗಿ ಕಂಡಾಗ ಕಡಲು ಮೈಯುಬ್ಬುವಂತೆ, ಅಮಾವಾಸ್ಯೆಯಂದು ಚಂದ್ರನು ಕಾಣದೆ ಇರುವಾಗಲೂ ಕಡಲು ವಿಹ್ವಲವಾಗಿ ಉಕ್ಕೇರುವುದು! ಅರಿವು–ಮರೆವಿನ ಆಟವಿದು. ಚಂದ್ರನನ್ನು ಕಾಣದೆ ಕಡಲು ವಿಹ್ವಲವಾಗುವುದೆಂದರೆ ಅದು 'ಮರೆವನ್ನು' ಅನುಭವಿಸಿದಂತೆ! ಮರೆವನ್ನು ಪಡೆದಂತೆ! ಅರಿವನ್ನು ಪಡೆಯಲಾಗುವಂತೆ ಮರೆವನ್ನೂ ಪಡೆಯಲಾಗುತ್ತದೆ! ಅದು ಕಡಲಿನ 'ಅದೃಷ್ಟ'! ಅಂದರೆ ಜೀವದ ಅದೃಷ್ಟ! ಇವೆಲ್ಲ ಸೃಷ್ಟಿಶೀಲತೆಯ ರಹಸ್ಯವನ್ನು ತೆರೆದಿಡುವ ವಿಷಯಗಳು. ವಿಶ್ವಮನಸ್ಸಿನಿಂದ ಚಂದ್ರ ಮೂಡಿಬಂದ ಎನ್ನುತ್ತಾರೆ ಪೂರ್ವಿಕರು. ಇಂಥ ಚಂದ್ರ, ವ್ಯಕ್ತಿ ಮನಸ್ಸುಗಳನ್ನು ಪ್ರಭಾವಿಸುವುದೇನು ಆಶ್ಚರ್ಯ. ಒಂದು ಗುಟ್ಟು ಹೇಳುತ್ತೇನೆ – ನಮ್ಮ ಬದುಕು ಚಾಂದ್ರಮಾನದಲ್ಲಿ ನಡೆದಿದೆ. ಅದು ಸೌರಮಾನದತ್ತ ತಿರುಗಬೇಕಾದರೆ ಚಂದ್ರನ ದಯೆ ಬೇಕು!

◆ **ನೀವು ಪರಿಸರ ಚಳವಳಿಗೆ ಬಂದ ಸಂದರ್ಭ?**

ನಮ್ಮ ಊರಿನಲ್ಲಿ ಹರಿಯುವ ಹೊಳೆಗೆ 'ಕುಮಾರಧಾರೆ' ಎಂದು ಹೆಸರು. ಕುಮಾರಧಾರೆಗೆ ಅಣೆಕಟ್ಟು ಕಟ್ಟುವ ಒಂದು ಯೋಜನೆ ಸಿದ್ಧವಾಗಿತ್ತು. ಹಳ್ಳಿಯ ಬಹುಭಾಗ ಮುಳುಗಡೆಯಾಗುತ್ತದೆ ಎಂದೆಲ್ಲ ಸುದ್ದಿ ಹಬ್ಬಿತ್ತು. ಹೋರಾಟಕ್ಕೆ ಧುಮುಕಲೇಬೇಕಾಯಿತು. ಅದು ಬೇರೆಯೇ ಕಥೆ!

◆ **ಒಟ್ಟಾರೆ ಸಾಹಿತ್ಯದ 'ಆಶಯ'ದ ಬಗೆಗೆ ನಿಮ್ಮ ಅಭಿಪ್ರಾಯ?**

ಅರಿವನ್ನು ವಿಸ್ತರಿಸುವುದು, ಅರಿವು–ಮರೆವಿನ ಆಟದಲ್ಲಿ ಪಾಲ್ಗೊಳ್ಳುವುದು, ರೂಪಾಂತರಗಳನ್ನು ಗುರುತಿಸುವುದು, 'ತೋರಿಕೆ' ಮತ್ತು 'ಕಾಣ್ಕೆ'ಗಳ ನಡುವಣ ಒಳಮುನಿಸನ್ನು ರಾಜಿ ಮಾಡುವುದು, 'ಕಲಾವಿದ' ಮತ್ತು 'ಪ್ರೇಕ್ಷಕ' ಒಬ್ಬರೊಳಗೊಬ್ಬರು ಹೇಗೆ ಬೆರೆತಿರುತ್ತಾರೆ ಎಂದು ಅನುಭವದಲ್ಲಿ ತಿಳಿಯುವುದು, 'ನೀರೆಲ್ಲವೂ ತೀರ್ಥ' ಎಂದಂತೆ 'ತೀರ್ಥಗಳೆಲ್ಲವೂ ನೀರು' ಎಂದು ಕೂಡ ಅರಿಯುವುದು, ಒಟ್ಟಿನಲ್ಲಿ ತನ್ನನ್ನು ಕಳೆದುಕೊಳ್ಳದೆ ಸಾಧಾರಣೀಕರಣವನ್ನು ಸಾಧಿಸುವುದು.

◆ **ತಾತ್ವಿಕತೆಯ ಕೊರತೆಯು ಸಾಹಿತ್ಯವು ಜೊಳ್ಳಾಗಲು ಕಾರಣವಾಗುತ್ತಿದೆಯೆ?**

ಕಾರಣವಾಗಬಹುದು. ಹಾಗೆಯೇ ತಾತ್ವಿಕತೆಯಿಂದಾಗಿಯೇ ಸಾಹಿತ್ಯವು ಜೊಳ್ಳಾಗಲೂಬಹುದು. ಏಕೆಂದರೆ ಯಾವುದೇ ಬಗೆಯ ಹೇರುವಿಕೆಗೆ ಬದುಕು ತನ್ನನ್ನು ತೆರೆದುಕೊಳ್ಳುವುದಿಲ್ಲ. ಅದು ಗುಪ್ತಗಾಮಿನಿಯಾಗುತ್ತದೆ. ವಚನಗಳಲ್ಲಿ ಕಾಣುವಂತೆ, ಅರಿವು ತದ್ಗತವಾಗಿದೆ. ತದ್ಗತವಾದ ಅರಿವನ್ನು ತದ್ಗತವಾಗಿಯೇ ತಿಳಿಯಬಹುದಲ್ಲದೆ, ತದ್ಗತವಾಗದೆ ಹೊರಗಿನಿಂದ ತಿಳಿಯುವುದು ಸಾಧ್ಯವೆ? ಸಾಧ್ಯವಾಗಬಾರದೆನ್ನುವುದೇ ನ್ಯಾಯವಲ್ಲವೆ? 'ತತ್ವ'ವೆಂದರೆ ಅದರ 'ಅದುತನ'. ಅದು ತದ್ಗತ. ತದ್ಗತವಾದುದು ಸಿಗದೆ ಬೇರೆ ಏನಿದ್ದರೇನು? ತದ್ಗತವಾದುದು ಸಿಕ್ಕಿದರೆ ಬೇರೆ ಏನಿಲ್ಲದಿದ್ದರೇನು?

◆ **ಭಾರತೀಯ ಸಾಹಿತ್ಯ ಕೊಟ್ಟ ಎರಡು ಅದ್ಭುತ ವ್ಯಕ್ತಿತ್ವಗಳು 'ರಾಮ' ಮತ್ತು 'ಕೃಷ್ಣ'. ಮತ್ತೆ ಬದುಕಿನಲ್ಲಿ ಈ ವ್ಯಕ್ತಿತ್ವಗಳನ್ನು ರೂಪಿಸಿಕೊಳ್ಳುವ ಸಾಧ್ಯತೆಯ ಬಗ್ಗೆ ನಿಮಗೆ ಏನನಿಸುತ್ತದೆ?**

ಇವೆಲ್ಲ ನನಗೆ ದೊಡ್ಡ ಆಶ್ಚರ್ಯಗಳು. ಜಗತ್ತಿನ ಎಂಟು ಆಶ್ಚರ್ಯಗಳು ಎಂದೆಲ್ಲಾ ಹೇಳುತ್ತಾರಲ್ಲ. ನಮ್ಮ ದೇಶದ ಅತಿದೊಡ್ಡ ಆಶ್ಚರ್ಯವೆಂದರೆ – ವಾಙ್ಮಯದಲ್ಲಿ ಕಾಣಿಸಿಕೊಂಡ ಪಾತ್ರಗಳು ಜೀವನದಲ್ಲಿ ಇಳಿದುಬಂದಿರುವುದು. ಗೋಡೆಯಲ್ಲಿ ಬಿಡಿಸಿದ ಚಿತ್ರವೊಂದು ಇದ್ದಕ್ಕಿದ್ದಂತೆ ಮೈಕುಲುಕಿಕೊಂಡು 'ನಾನು ಗೋಡೆಯಲ್ಲಿರಬೇಕೇನಪ್ಪ, ನಿನ್ನೊಡನೆ ಮಾತನಾಡಬೇಕಿದೆ ನಾನು' ಎಂದು ಇಳಿದುಬಂದರೆ ಹೇಗೋ ಹಾಗೆ! ಇದರರ್ಥವೇನೆಂದರೆ – ಬದುಕಿನಿಂದಲೇ ವಾಙ್ಮಯಕ್ಕೆ ಹೋಗಿ ಮರಳಿ ಬದುಕಿಗೆ ಬರಲೇಬೇಕಾದ ಪ್ರಕ್ರಿಯೆ ಇದು ಎಂದು. ಇದೊಂದು ಚಕ್ರ! ಬದುಕು ಮತ್ತು ಸಾಹಿತ್ಯಗಳ